ಕೊಂಡಿದ್ದಾರೆ. ಆದ್ದರಿಂದ ನಾನು ಹೇಳುವುದು ಇಷ್ಟೆ, ನಮ್ಮ ಕಡೆಯಿಂದ ಈ ಕೆಲಸ ಮಾಡುವುದರಲ್ಲಿ ಹೆಚ್ಚು ಕಡಿಮೆ ಆಗಿಲ್ಲ.

ಅಧ್ಯಕ್ಷರು.—ಇಲ್ಲಿಗೆ ಇದು ಮುಗಿಯಿತು. ಈಗ ಖಿರ್ಗಿಯವರದು.

(ಗದ್ದಲ)

ಶ್ರೀ ಕೆ.ಹೆಚ್. ಶ್ರೀನಿವಾಸ್.—ಇವರು ಹೇಳುವ ಕಾರಣಗಳು ಸರಿಯಾದ್ದಲ್ಲ. ಇವರು ಮೇಯರ್ ಅವರನ್ನೇ ಕರೆಸಿ ಮಾತನಾಡಬಹುದಿತ್ತು. ಜಿಲ್ಲಾಧಿಕಾರಿಗಳು ಮತ್ತಿನ್ಯಾರೋ ಸೇರಿ ಮಂತ್ರಿಗಳಿಂದ ಈ ಹೇಳಿಕೆ ಹೇಳಿಸಿದ್ದಾರೆ ಅಷ್ಟೆ.

ಶ್ರೀ ಎಂ.ಎಸ್. ಕೃಷ್ಣನ್.—ಧಾರವಾಡ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಸಮರ್ಪಕ ವ್ಯವಸ್ಥೆ ಮಾಡುವುದಾಗಿ ಮಂತ್ರಿಗಳು ಹೇಳಿದರು. ಆ ಬಗ್ಗೆ ನೀವು ಏನು ಮಾಡಿದ್ದೀರಿ ಎಂಬುದನ್ನು ಹೇಳಿ. ಬದಲಿಗೆ ಅವರು ಹೇಳಿದ್ದನ್ನೇ ನೀವೂ ಹೇಳಿದರೆ ಉಪಯೋಗವಿಲ್ಲ.

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಸಚಿವರು).—ಹುಬ್ಬಳ್ಳಿ-ಧಾರವಾಡ ನಗರಗಳಿಗೆ ನೀರು ಒದಗಿಸುವ ದೃಷ್ಟಿಯಿಂದ ಮುಖ್ಯ ಮಂತ್ರಿಗಳ ನಿಧಿಯಿಂದ ೩೫ ಲಕ್ಷ ರೂಪಾಯಿಗಳನ್ನು ಕೊಡಲಾಗಿತ್ತು. ಆ ನಗರಪಾಲಿಕೆಯ ಆರ್ಥಿಕ ಸ್ಥಿತಿ ಸರಿಯಾಗಿಲ್ಲ ಎಂಬ ಕಾರಣದಿಂದ ಕೆಲವು ಕೊಳವೆ ಬಾವಿಗಳನ್ನು ಕಡಿಮೆ ಮಾಡಲಾಗಿದೆ ಎಂದು ಮೇಯರ್ ಅವರು ಪತ್ರ ಬರೆದಿದ್ದಾರೆ. ಕೊಳವೆ ಬಾವಿ ತೆಗೆದಿರುವುದೂ ಮುಖ್ಯ ಮಂತ್ರಿಗಳ ನಿಧಿಯಿಂದ ಕೊಟ್ಟ ಹಣದಿಂದಲೆ. ಸೌಂದತ್ತಿಯಲ್ಲಿ ನೆಟ್ ರಿಂಗ್ಸ್ ಎಲ್ಲಾ ಸವೆದು ಹೋಗಿತ್ತು. ಕಾರ್ಪೊರೇಷನ್ ಹಣ ಕೊಟ್ಟ ಮೇಲೆ ೨೫ ಲಕ್ಷ ಗ್ಯಾಲನ್ ನೀರು ಹೆಚ್ಚು ಬರುತ್ತಿದೆ. ಆದನ್ನು ಕಣಿವೆ ಹೊನ್ನಾಪುರದಿಂದ ಹಳೇ ಹುಬ್ಬಳ್ಳಿಗೆ ಕೊಡತಕ್ಕಂತಹ ವ್ಯವಸ್ಥೆ ಮಾಡಿದ್ದೇವೆ. ಮಲಪ್ರಭಾದ ನೀರು ಅರ್ಧ ಹುಬ್ಬಳ್ಳಿಗೆ ಬರುವುದಿಲ್ಲ. ನನ್ನ ಜೊತೆಯಲ್ಲಿ ಮಾನ್ಯ ಹಿಂದಸಗೇರಿಯವರನ್ನೂ ಕೂಡ ಕರೆದುಕೊಂಡು ಹೋಗಿದ್ದೇನೆ. ನೀರ ಸಾಗರ ಭಾಗದಲ್ಲಿ ಕೊಳವೆಬಾವಿಗಳನ್ನು ಹೆಚ್ಚು ಮಾಡತಕ್ಕಂತಹ ನಿರ್ಣಯವನ್ನು ತೆಗೆದುಕೊಂಡಿದ್ದೇವೆ ಮಲಪ್ರಭಾದಿಂದ ಕೆಲವು ಕಡೆ ಮಾತ್ರ ನೀರು ಒದಗಿಸಲಿಕ್ಕೆ ಸಾಧ್ಯ. ಎಲ್ಲಾ ಕಡೆಗೆ ಒದಗಿಸಲಿಕ್ಕೆ ಸಾಧ್ಯವಾಗುವುದಿಲ್ಲ. ೩೫ ಲಕ್ಷ ರೂಪಾಯಿಗಳು ಮಾನ್ಯ ಮುಖ್ಯ ಮಂತ್ರಿಗಳ ನಿಧಿಯಿಂದ ಬಂದಿದ್ದು ಎಲ್ಲಿ ನೀರಸಾಗರ ಬತ್ತಿದೆ ಅಲ್ಲಿ ೭೫ ರಷ್ಟು ಕೊಳವೆ ಬಾವಿಗಳನ್ನು ಹಾಕಿದ್ದೇವೆ. ಎಲ್ಲೆಲ್ಲಿ ಬೇಕೋ ಅಲ್ಲಲ್ಲಿ ಕೊಳವೆ ಬಾವಿಗಳನ್ನು ಹಾಕಿದ್ದೇವೆ. ತೊಂದರೆ ಎಲ್ಲಿ ಬಂದಿದೆ ಎಂದರೆ ಕೆಲವು ಕಡೆ ಕೈ ಪಂಪ್ ಹಾಕತಕ್ಕಂಥದ್ದನ್ನು ನಿಲ್ಲಿಸಲಾಗಿತ್ತು. ಈಗ ಅಂಥ ಕಡೆ ಕೂಡಲೇ ಮಾಡಲಿಕ್ಕೆ ಆದೇಶ ಕೊಡಲಾಗಿದೆ.

ಶ್ರೀ ಎ.ಎಂ ಜಿ. ಹಿಂದಸಗೇರಿ.—ಮಾನ್ಯ ಅಧ್ಯಕ್ಷರೇ, ೭ ಕೋಟಿ ರೂಪಾಯಿ .....

ಅಧ್ಯಕ್ಷರು.—ನಾನು ಅವಕಾಶ ಕೊಡುವುದಿಲ್ಲ ಅರ್ಧ ಗಂಟೆಯಾಗಿದೆ, ಇನ್ನು ಅರ್ಧ ನಿಮಿಷವೂ ಕೂಡ ಅವಕಾಶ ಕೊಡುವುದಿಲ್ಲ. ಮಾನ್ಯ ಖಿರ್ಗಿಯವರೇ ತಾವು ಪ್ರಾರಂಭ ಮಾಡಿ. ಈ ಚರ್ಚೆ ಇಲ್ಲಿಗೇ ಮುಕ್ತಾಯವಾಯಿತು.

೨) ಗುಲ್ಬರ್ಗಾ ಹೊರ ವಲಯದಲ್ಲಿ ವಾಸಿಸುವ ಮುಖ್ಯ ಕೃಷಿ ಅಧಿಕಾರಿಯವರ ಮೇಲೆ ದರೋಡೆ ಕೋರರು ಹಲ್ಲೆ ನಡೆಸಿದ ಬಗ್ಗೆ.

SRI MALLIKARJUNA M. KHARGE (Gurumitkal).- Sir, I call the attention of the Minister for Home to the dacoity that took place on 4-3-1987 at Godutayee Extension in Gulbarga City.

ಶ್ರೀ ಬಿ. ರಾಚಯ್ಯ (ಗೃಹ ಸಚಿವರು).—ಮಾನ್ಯ ಅಧ್ಯಕ್ಷರೆ, ನಾನು ಒಂದು ಹೇಳಿಕೆಯನ್ನು ಮಾಡಬಯಸುತ್ತೇನೆ.

ದಿನಾಂಕ ೪/೫-೩-೧೯೮೭ ರಂದು ಮಧ್ಯ ರಾತ್ರಿ ೧.೪೫ ಗಂಟೆಯ ಸಮಯದಲ್ಲಿ ಗುಲ್ಬರ್ಗಾ ಹೊರ ವಲಯದಲ್ಲಿ ವಾಸಿಸುವ ಮುಖ್ಯ ಕೃಷಿ ಅಧಿಕಾರಿಯಾದ ಶ್ರೀ ಪ್ರಹ್ಲಾದರಾವ್ ರವರ ಮೇಲೆ

೮ ಜನ ದರೋಡೆಕೋರರು ಮಾರಕಾಸ್ತ್ರಗೊಂದಿಗೆ ಆಕ್ರಮಣ ನಡೆಸಿದರು. ಅವರು ದೊಡ್ಡ ದೊಡ್ಡ ಕಲ್ಲುಗಳಿಂದ ಮನೆಯ ಬಾಗಿಲನ್ನು ಒಡೆದು, ಮನೆಯೊಳಗಿದ್ದ ೪ ಜನರನ್ನು ಗಾಯಗೊಳಿಸಿದ್ದಾರೆ. ನಂತರ ಚಿನ್ನ ವಂತ್ತು ಬೆಳ್ಳಿ, ಒಡವೆಗಳು ಹಾಗೂ ಒಂದು ಟೇಪ್ ರೆಕಾರ್ಡರ್ ಸೇರಿ ೩೦,೫೦೦ ರೂಪಾಯಿ ಬೆಲೆ ಬಾಳುವ ಪದಾರ್ಥಗಳನ್ನು ಸಹ ಅಪಹರಿಸಿದ್ದಾರೆ.

ಸುದ್ದಿಯನ್ನು ತಿಳಿದ ಕೂಡಲೇ ಗುಲ್ಬರ್ಗಾ ಪೊಲೀಸ್ ಸೂಪರಿಂಟೆಂಡೆಂಟ್‌ರವರು ಹೆಚ್ಚುವರಿ ಪೊಲೀಸ್ ಸೂಪರಿಂಟೆಂಡೆಂಟ್‌ರವರೊಡನೆ ಸ್ಥಳಕ್ಕೆ ಸಂಮಾರು ಮಧ್ಯರಾತ್ರಿ ೨–೩೦ ಗಂಟೆ ಸಮಯಕ್ಕೆ ಧಾವಿಸಿ ಪರಿಶೀಲನೆ ನಡೆಸಿದರು. ಶ್ವಾನದಳವನ್ನು ಸಹ ಘಟನೆ ನಡೆದ ಸ್ಥಳಕ್ಕೆ ಕರೆದುಂಕೊಂಡು ಹೋಗಲಾಗಿತ್ತು. ಆದೂ ಫಲಕಾರಿಯಾಗಲಿಲ್ಲ. ಈ ಸಂಬಂಧದಲ್ಲಿ ಸ್ಟೇಷನ್ ಬಜಾರ್ ಪೊಲೀಸ್ ಸ್ಟೇಷನ್‌ನಲ್ಲಿ ಕ್ರೈಂ ನಂ. ೪೦/೮೭ ಕಲಂ ೩೯೫ ರಲ್ಲಿ ನೊಂದಾಯಿಸಿಕೊಳ್ಳಲಾಗಿದೆ.

ದರೋಡೆಕಾರರು ಕನ್ನಡ ಭಾಷೆಯನ್ನು ಮಾತನಾಡುತ್ತಿದ್ದು, ಅವರು ಸಂಮಾರು ೨೫ ರಿಂದ ೩೦ ವರ್ಷ ವಯಸ್ಕರಾಗಿರುತ್ತಾರೆ.

ಈ ಪ್ರಕರಣದ ತನಿಖೆ ತೀವ್ರಗತಿಯಿಂದ ಮುಂದುವರೆಯುತ್ತಿದೆ.

†ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ನಾನು ಹಾಕಿದ್ದು ಎರಡು ಸ್ಥಳಗಳ ಬಗ್ಗೆ. ಅಂದರೆ, ಹುಬ್ಬಳ್ಳಿ ವಂತ್ತು ಗುಲ್ಬರ್ಗದ ಬಗ್ಗೆ. ಈಗ ಗುಲ್ಬರ್ಗದ ಬಗ್ಗೆ. ಈಗ ಗುಲ್ಬರ್ಗದ ಬಗ್ಗೆ ಮಾತ್ರ ಉತ್ತರ ಬಂದಿದೆ. ದರೋಡೆ ಆಗಿದ್ದು ಎರಡು ಕಡೆ. ಅವರು ಹೇಳಿದ ಪ್ರಕಾರ ಪ್ರಹ್ಲಾದ ರಾವ್, ಕೃಷಿ ಅಧಿಕಾರಿಯವರ ಮನೆಯಲ್ಲಿ ಇನ್ನೇ ತಾರೀಖು ದೊಡ್ಡ ಕಳ್ಳತನವಾಗಿದೆ. ಇಂಥ ದೊಡ್ಡ ಡಕಾಯಿತಿ ಗುಲ್ಬರ್ಗದಲ್ಲಿ ಆಗಿರತಕ್ಕಂಥದ್ದು ಇದೇ ಪ್ರಥಮ ಭಾರಿ. ಹಿಂದೆಂದೂ ಕೂಡಾ ಇಂಥ ಒಂದು ಘಟನೆ ಅಲ್ಲಿ ನಡೆದಿಲ್ಲ. ಸಂವಾರು ೨೦–೩೦ ವರ್ಷಗಳಲ್ಲಿ ಇದು ಮೊದಲನೆಯದು ಇರಬಹುದು. ಅಲ್ಲಿ ನನಗೆ ಗೊತ್ತಾದ ಪ್ರಕಾರ ಕೆಲವು ಜನ ಅಂಬಾಸಿಡರ್ ಕಾರಿನಲ್ಲಿ ಬಂದು ಅವರೆಲ್ಲರೂ ಕರಿ ಬಟ್ಟೆಯನ್ನು ಹಾಕಿಕೊಂಡು..... ...

ಅಧ್ಯಕ್ಷರು.—ವಿವರಣೆ ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಉತ್ತರದ ಮೇಲೆಯೇ ಕೇಳುತ್ತಿದ್ದೇನೆ. ಆಪರು ಯಾರ್ಯಾರು ಎನ್ನತಕ್ಕಂಥದ್ದು ಸವಿಸ್ತಾರವಾಗಿ ಕೊಟ್ಟಿಲ್ಲ. ಕನ್ನಡ ಮಾತನಾಡುತ್ತಿದ್ದರು ಎಂದು ಹೇಳಿದ್ದಾರೆ. ಈ ಡಕಾಯಿತಿಯಲ್ಲಿ ಇನ್‌ವಾಲ್ವ್ ಆದವರು ಬಹುಶಃ ಕರ್ನಾಟಕದವರು ಎನ್ನತಕ್ಕ್ಕಥ ಮಾತನ್ನು ಅವರು ಒಪ್ಪಿಕೊಂಡಹಾಗೆ ಆಗುತ್ತದೆ. ಬಾರ್ಡ್‌ರ್‌ನಲ್ಲಿ ಇರತಕ್ಕಂಥವರು ಇರಬಹುದು. ಅನೇಕ ಸಲ ಈ ನದಲ್ಲಿ ಡಕಾಯಿತಿ ಕೇಸಸ್ ಬಗ್ಗೆ ಚರ್ಚೆಗೆ ಬಂದಾಗ ಬೆಂಗಳೂರಿನಲ್ಲಾಗಲಿ, ಬಳ್ಳಾರಿಯಲ್ಲಾಗಲಿ, ಕೋಲಾರದಲ್ಲಾಗಲಿ, ಈ ಕೇಸ್‌ಗಳು ಆದಾಗ ಅವರು ಹೇಳುವುದು ಏನು ಎಂದರೆ ಆಂಧ್ರಪ್ರದೇಶದಿಂದ ವಂತ್ತು ತಮಿಳುನಾಡಿನಿಂದ ದರೋಡೆಕೋರರು ಬರತಕ್ಕಂಥವರು ಇದ್ದಾರೆ ಎನ್ನತಕ್ಕಂಥದ್ದನ್ನು ಹೇಳಿದರು. ಇದನ್ನು ಸರಿಯಾದ ರೀತಿಯಿಂದ ಪತ್ತೆ ಹಚ್ಚಿ ಇನ್ನು ಮುಂದೆ ಈ ರೀತಿಯಲ್ಲಿ ಆಗದಂತೆ ಗುಲ್ಬರ್ಗ ಸಿಟಿಯನ್ನು ನೋಡಿಕೊಳ್ಳುತ್ತೀರಾ ? ಈ ಪ್ರಕಾರ ದರೋಡೆ ಹೆಚ್ಚಿನ ರೀತಿಯಲ್ಲಿ ಆಗುವುದನ್ನು ಜನರು ನೋಡಿ ಹೆದರಿಕೊಳ್ಳುತ್ತಿದ್ದಾರೆ. ಇದರ ಬಗ್ಗೆ ಏನು ವ್ಯವಸ್ಥೆ ಮಾಡುತ್ತೀರಾ?

ಅಧ್ಯಕ್ಷರು.—ಕಾಂತಾರವರೇ ನೀವು ಕೇಳಿ.

ಶ್ರೀ ಎಸ್. ಕೆ. ಕಾಂತ.—ಅಧ್ಯಕ್ಷರೇ, ಇದು ನನ್ನ ಮಂತಕ್ಷೇತ್ರ. ಖರ್ಗೆಯವರು ಹೇಳಿದ ಹಾಗೆ ಇಂಥ ಘಟನೆಗಳು ಈವರೆಗೂ ಆಗಿರತಕ್ಕಂಥದ್ದು ಇರಲಿಲ್ಲ. ಆದರೆ ಉತ್ತರದಲ್ಲಿ ನೋಡಿದಾಗ ಯಾವ ರೀತಿಯಿಂದ ಆಯಿತು ಈ ಘಟನೆ ಎನ್ನತಕ್ಕಂಥ ವಿವರಣೆ ಇಲ್ಲ. ಶನೇ ತಾರೀಖು ಮುಂಜಾನೆ.....

ಅಧ್ಯಕ್ಷರು.—ವಿವರಣೆ ಕೇಳಿ.

ಶ್ರೀ ಎಸ್. ಕೆ. ಕಾಂತ.—ಡಕಾಯಿತಿ ಬಗ್ಗೆ ಸ್ವಲ್ಪ ವಿವರಣೆಯನ್ನು ಹೇಳುತ್ತೇನೆ. ತಾವು ದಯವಿಟ್ಟು ಕೇಳಿ.

ಅಧ್ಯಕ್ಷರು.—ಅದೆಲ್ಲವನ್ನೂ ಹೇಳಿದ್ದಾರೆ. ವಿವರಣೆ ಕೇಳಿ.

ಶ್ರೀ ಎಸ್.ಕೆ. ಕಾಂತ.—ವಿವರಣೆ. ವಿವರಣೆ ಎಂದರೆ ಏನು ಕೇಳಬೇಕು. ತಾವು ಸ್ವಲ್ಪ ಅವಕಾಶ ಕೊಡಬೇಕು. ಮುಂಜಾನೆ ೨ ಗಂಟೆಗೆ ಎಂಟು ಜನರು ಅಲ್ಲಿ ಹೊರಗಡೆ ಇತರ ಮನೆಗಳಿಗೆ ಕೊಂಡಿ ಹಾಕಿ ಒಳಗಡೆ ನುಗ್ಗಿ ಪ್ರಹ್ಲಾದರಾವ್ ಎಂಬುವರನ್ನು ಕೊಡಲಿಯಿಂದ ಹೊಡೆದು.....

ಅಧ್ಯಕ್ಷರು.—ಉತ್ತರದಲ್ಲಿ ಕೊಟ್ಟಿದ್ದಾರೆ.....—

ಶ್ರೀ ಎಸ್.ಕೆ. ಕಾಂತ.—ಉತ್ತರದಲ್ಲಿ ಬರೆದಿಲ್ಲ. ಇವತ್ತು ಅವರ ಪರಿಸ್ಥಿತಿ ಚಿಂತಾಜನಕವಾಗಿದೆ. ಅದನ್ನು ಈ ಸದನದ ಗಮನಕ್ಕೆ ತರುತ್ತಿದ್ದೇನೆ. ಅವರ ಪರಿಸ್ಥಿತಿ ಚಿಂತಾಜನಕವಾಗಿದ್ದು ಅವರ ಆಸ್ಪತ್ರೆಯಲ್ಲಿ ಇದ್ದಾರೆ. ಇಂಥ ಒಂದು ಪರಿಸ್ಥಿತಿ ಇವತ್ತಿನ ದಿವಸ ಆದಾಗ ಅಲ್ಲಿ ಕನ್ನಡ ಮಾತನಾಡುತ್ತಿದ್ದರು ಎಂದು ಮಾನ್ಯ ಮಂತ್ರಿಯವರು ಹೇಳಿದರು. ಅಲ್ಲಿ ಯಾರೂ ಕೂಡಾ ಮಾತನಾಡುತ್ತಿರಲಿಲ್ಲ, ಸೂಚನೆ ಮಾಡುತ್ತಿದ್ದರು, ಮೂಕ ಭಾಷೆಯಿಂದ ಸೂಚನೆ ಮಾಡುತ್ತಿದ್ದರು ಎಂದು ನನಗೆ ತಿಳಿದು ಬಂದಿದೆ. ಇದರಲ್ಲಿ ಒಬ್ಬ ಹೆಣ್ಣುಮಗಳನ್ನು ಆವಳ ಕಿವಿಯನ್ನು ಹರಿದು ರಿಂಗನ್ನು ಕಿತ್ತುಕೊಂಡಿದ್ದಾರೆ. ಈ ವಿಚಾರವನ್ನು ಉತ್ತರದಲ್ಲಿ ಬರೆದಿಲ್ಲ ಮಾನ್ಯ ಮಂತ್ರಿಗಳು ಇದರ ಬಗ್ಗೆ ಸಂಪೂರ್ಣವಾದಂಥ ವಿವರಣೆಗಳನ್ನು ಕೊಡಬೇಕು. ಅಲ್ಲಿ ಏನಾಯಿತು? ಹೆಣ್ಣು ಮಕ್ಕಳ ಪರಿಸ್ಥಿತಿ ಏನು ಇದೆ, ಪ್ರಹ್ಲಾದ ರಾವ್, ಕೃಷಿ ಅಧಿಕಾರಿಯವರ ಪರಿಸ್ಥಿತಿ ಏನು ಇದೆ ಎನ್ನತಕ್ಕಂಥ ವಿವರಣೆಯನ್ನು ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ ರಾಚಯ್ಯ.—ಮಾನ್ಯ ಅಧ್ಯಕ್ಷರೇ. ಮಧ್ಯರಾತ್ರಿ ಬಹುಶಃ ೧-೪೫ಕ್ಕೆ ಈ ಘಟನೆ ಆಗಿರುವುದು ಎಂದು ಹೇಳಿದ್ದೇನೆ. ಕಲ್ಲುಗುಂಡುಗಳಿಂದ ಮನೆ ಬಾಗಿಲನ್ನು ಒಡೆದು ಒಳಗೆ ನುಗ್ಗಿದ್ದಾರೆ. ಕೊಡಲಿಯಿಂದ ಪ್ರಹ್ಲಾದರಾವ್ ಅವರನ್ನು ಹೊಡೆದಿದ್ದಾರೆ ಮತ್ತು ಬೇರೆ ಮನೆಗಳವರು ಬಂದು ಬಿಡುತ್ತಾರೆ ಈ ಕೂಗಾಟದಲ್ಲಿ ಎಂದು ತಿಳಿದುಕೊಂಡು ಅಲ್ಲಿಗೆ ಹೋಗುವುದಕ್ಕೆ ಮುಂಚಿತವಾಗಿ ಇತರ ಮನೆಗಳಿಗೆ ಚಿಲಕ ಹಾಕಿ ಬಂದಿದ್ದಾರೆ. ಆದ್ದರಿಂದ ಹೊರಗಡೆ ಮನೆಯವರು ಓಡಿಬರುವುದಕ್ಕೆ ಆಗಿಲ್ಲ. ಕೆಲವು ಡಕಾಯಿತರು ತಂತ್ರವನ್ನು ಇಟ್ಟುಕೊಂಡಿರುತ್ತಾರೆ. ಅವರು ಕನ್ನಡ ಮಾತನಾಡಲಿಲ್ಲ ಎಂದು ಹೇಳಿದರು, ಒಬ್ಬರು ಕನ್ನಡವನ್ನು ಸೇರಿಸಿದರು ಎಂದು ನನಗೆ ಇಲ್ಲಿರುವ ವರದಿಪ್ರಕಾರ ಬಂದಿದೆ. ಆದ್ದರಿಂದ ಇಲ್ಲಿರುವವರು ಮತ್ತು ಹೊರಗಡೆಯವರು ಒಟ್ಟಾಗಿ ಸೇರದೆ ಈ ಕೆಲಸ ಆಗುವುದಿಲ್ಲ. ಅವರು ಬಂದು ಇಲ್ಲಿ ಈ ವಿಷಯಗಳನ್ನು ತಿಳಿದುಕೊಳ್ಳಬೇಕಾಗಿದ್ದರೆ ಸ್ವಲ್ಪಮಟ್ಟಿಗೆ ಲೋಕಲ್ ಆಗಿರತಕ್ಕಂಥ ಜನರ ಸಹವಾಸ ಅವರಿಗೆ ಇರಲೇಬೇಕು. ಆ ದೃಷ್ಟಿಯಿಂದ ಆಂಥ ಪ್ರದೇಶದವರ ಜೊತೆಯಲ್ಲಿ ಸಂಪರ್ಕ ಮಾಡುತ್ತಿದ್ದೇವೆ ಮತ್ತು ನಾವು ಇಲ್ಲಿ ಒಂದು ಕ್ರೈಂ ಪ್ರಿವೆಷನ್ ಸ್ಕ್ವಾಡ್ ಏನು ಇದೆ, ಅದನ್ನು ಜಿಲ್ಲಾಮಟ್ಟದಲ್ಲಿ ಮಾಡಿದ್ದೇವೆ. ಅದು ಹಿಂದೆ ಇರಲಿಲ್ಲ. ರಾತ್ರಿ ಕಾಲದಲ್ಲಿಯೂ ಕೂಡಾ ಗಸ್ತು ತಿರುಗುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ.
ಸರಿಯಾಗಿ ಗಸ್ತು ತಿರುಗಲು ಆದೇಶ ಕೊಟ್ಟಿದ್ದೇನೆ. ಡಕಾಯಿತಿ ಆದಂತಹ ಸಂದರ್ಭದಲ್ಲಿ ತಕ್ಷಣ ಹಿಡಿಯಲು ಪ್ರಯತ್ನ ಮಾಡಿದ್ದೇವೆ, ಪೋಲೀಸರು ಗಸ್ತು ತಿರುಗಿ ಹೊರಟರು ಹೋದುದ್ದನ್ನು ನೋಡಿ ಕೊಂಡು ಹುಬ್ಬಳ್ಳಿ ನಗರ ಮತ್ತು ಇಲ್ಲಿ ಘಟನೆಗಳು ನಡೆದಿದೆ. ಇಂಥ ಪ್ರಸಂಗಗಳಲ್ಲಿ ತಕ್ಷಣ ಹಿಡಿಯಲು ಪ್ರಯತ್ನ ಮಾಡುತ್ತೇನೆ. ನೊಂದಿರತಕ್ಕೆ ಜನರಿಗೆ ನನ್ನ ಅನುಕಂಪವನ್ನು ವ್ಯಕ್ತಪಡಿಸುತ್ತೇನೆ, ಮತ್ತು ಅವರಿಗೆ ಯಾವ ರೀತಿ ಸಹಾಯ ಮಾಡಬೇಕು ಅದನ್ನು ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅವರು ಕೊಟ್ಟಿರತಕ್ಕ ಸ್ಟೇಟ್‌ಮೆಂಟ್ ಪ್ರಕಾರ ೧-೪೫ಕ್ಕೆ ಘಟನೆ ನಡೆಯಿತಂತೆ. ೨-೩೦ಕ್ಕೆ ಡಿವಿಜನಲ್ ಸೂಪರಿಂಟೆಂಡೆಂಟ್ ವಿಸಿಟ್ ಮಾಡಿರುತ್ತಾರೆ. ಕನಿಷ್ಠ ಪಕ್ಷ ಘಟನೆ ನಡೆದು ೬೫ ನಿಮಿಷ ಆದ ಮೇಲೆ ಅವರು ಯಾವ ರೀತಿ ಹೋದರು ಅವರು ಗುಲ್ಬರ್ಗಾದ ನಮ್ಮ ಬಾರ್ಡರ್ ಅನ್ನು ದಾಟಬೇಕಾದರೆ, ಅಫಜಲ್‌ಪುರ, ಆಲಂದ್, ಸೇಡಮ್ ಮತ್ತು ಹುಮನಾಬಾದ್ ಮುಖಾಂತರ ಹೋಗಬೇಕು. ಯಾವ ರೀತಿ ಅವರು ಹೋದರೂ ಸಹ ಈ ಬಾರ್ಡರ್ ದಾಟಬೇಕಾದರೆ ಕನಿಷ್ಠ ಪಕ್ಷ ೪೦-೫೦ಕಿಲೋಮೀಟರ್ ದೂರ ಇದೆ. ಇವರು ಕನಿಷ್ಠ ಪಕ್ಷ ಸಂಬಂಧಪಡ್ಡ ಸೇಡಮ್ ಪೋಲೀಸ್ ಸ್ಟೇಷನ್‌ಗೆ ಹಾಗೂ ಅಫಜಲ್‌ಪುರ, ಹುಮನಾಬಾದ್, ಆಲಂದ್ ಕಡೆಗೆ ಸೂಚನೆ ಕೊಟ್ಟಿದ್ದರೆ ಅವರು ಸಿಕ್ಕಿಬಿದ್ದುತ್ತಿರಲಿಲ್ಲವೇ ? ೫೦ ಕಿಲೋಮೀಟರ್ ದೂರವನ್ನು ಕ್ರಮಿಸಲು ಎಷ್ಟೇ ವೇಗವಾಗಿ ಕಾರ್ ನಡೆಸಿದರೂ ಕೊನೆಯಪಕ್ಷ ಒಂದು ತಾಸ್ ಆದರೂ ಬೇಕು. ಇವರು ಸೂಪರಿಂಟೆಂಡೆಂಟ್ ಜೊತೆ ಕಾಂಟ್ಯಾಕ್ಟ್ ಮಾಡಿ ಕ್ರಮವನ್ನು ಏಕೆ ತೆಗೆದುಕೊಂಡಿಲ್ಲ ಎನ್ನತಕ್ಕ ಸಂಶಯ

ಅನುಮಾನ ಬರುತ್ತದೆ. ಇದರಲ್ಲಿ ಪೋಲೀಸರ ನಿರ್ಲಕ್ಷ್ಯ ಇದೆ. ಹೊಸ ವಾತಾವರಣ ಪೋಲೀಸರಲ್ಲಿದೆ. ಡೀ ಮಾರಲೈಸೇಷನ್ ಪೋಲೀಸರಲ್ಲಿ ಬರುತ್ತಿದೆ.

ಅಧ್ಯಕ್ಷರು.—ಕ್ಲಾರಿಫಿಕೇಶನ್ ಮಾತ್ರ ಕೇಳಿ.

ಶ್ರೀ ಎಸ್. ಕೆ. ಕಾಂತ.—ಕವಿ ಹರಿದು ಹೋಯಿತು. ಮಾನ್ಯ ಮಂತ್ರಿಗಳು ಇಲ್ಲಿ ಲೋಕಲ್ ಆಗಿ ಕೆಲವರು ರೌಡಿಗಳನ್ನು ಹಿಡಿದುಕೊಂಡು ಇಂಥ ಒಂದು ಸಮಯ ಸಾಧಕತನದ ಕೆಲಸ ಮಾಡಿದ್ದಾರೆ ಎಂಬ ಊಹೆಯು ಬರುತ್ತದೆ ಎಂದು ಹೇಳಿದ್ದಾರೆ. ಅಂಥವರನ್ನು ಅಂದರೆ ನಮ್ಮ ಗುಲ್ಬರ್ಗಾದ ರೌಡಿಗಳ ಒಂದು ಲಿಸ್ಟ್ ಮಾಡಿ ಯಾರು ಡಕಾಯಿತಿ ಕೆಲಸ ಮಾಡತಕ್ಕಂಥವರು ಇದ್ದಾರೆ, ಅವರನ್ನು ಏನಾದರೂ ಬಂಧಿಸಿದ್ದಾರೆಯೇ ಅಥವಾ ಅವರನ್ನು ಏನಾದರೂ ವಿಚಾರಣೆ ಮಾಡಿದ್ದಾರೆಯೇ ಎಂಬ ಪ್ರಶ್ನೆ ಕೇಳಿದೆ. ಒಬ್ಬ ಹುಡುಗಿಯ ರಿಂಗನ್ನು ಕವಿಯು ಹರಿದು ಹೋಗುವಂತೆ ಕಿತ್ತುಕೊಂಡು ಹೋಗಿದ್ದಾನೆ. ಶ್ರೀ ಪ್ರಹ್ಲಾದರಾವ್ ಅವರ ಸ್ಥಿತಿ ಏನು ಇದೆ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಬಿ. ರಾಚಯ್ಯ.—ಪೋಲೀಸರು ಬಹುಶಃ ಈ ಘಟನೆ ಕೇಳಿದಾಕ್ಷಣ ರೈಲ್ವೆ ಸ್ಟೇಷನ್, ಬಸ್ ಸ್ಟೇಷನ್ ಈ ಎರಡೂ ಕಡೆಗಳಲ್ಲಿ ವಿಷಯ ಸರಿಯಾಗಿ ತಿಳಿದಿದ್ದರೆ ಹೋಗುತ್ತಿದ್ದರು. ಬೇರೆ ಭಾಗದ ಪೋಲೀಸ್ ಅಧಿಕಾರಿಗಳ ಜೊತೆ ಸಂಪರ್ಕಿಸಿದ್ದಾರೆ. ಆದ್ದರಿಂದ ತಕ್ಷಣ ಅವರನ್ನು ಹಿಡಿಯುವುದಕ್ಕಾಗದಿದ್ದರೂ ಕೂಡ ನಿಧಾನವಾಗಿಯಾದರೂ ಪತ್ತೆ ಮಾಡುತ್ತೇವೆ. ಇವೊತ್ತು ಇವರಿಗೆ ಆಗಿರತಕ್ಕದ್ದು ಅಂದರೆ ಕವಿ ಹರಿದಿರುವುದು, ದೇಹಕ್ಕೆ ಬಾಧೆ ಆಗಿರುವುದು. ಆದರೆ ಅವರನ್ನು ನೋಡಿಕೊಂಡು ಬರುವುದಕ್ಕೆ ಮಾತ್ರ ನನಗೆ ಅನುಕೂಲ ಆಗಲಿಲ್ಲ.

ಶ್ರೀ ವಲ್ಲಿಕಾರ್ಜುನ ಎಂ. ಖರ್ಗೆ.—ಕೇವಲ ಳಿಗೆ ನಿಮಿಷ ಡಿಫರೆನ್ಸ್ ಇದೆ. ಈ ಳಿಗೆ ನಿಮಿಷದಲ್ಲಿ ಹಿಡಿಯುವುದಕ್ಕಾಗಲಿಲ್ಲ ಎಂದರೆ ಯಾವಾಗ ಹಿಡಿಯುತ್ತಾರೆ.

ಶ್ರೀ ಬಿ. ರಾಚಯ್ಯ.—ತಪ್ಪಿತಸ್ಥರನ್ನು ಪತ್ತೆ ಹಚ್ಚುವ ಕೆಲಸ ನಡೆಯುತ್ತಿದೆ. ಈಗಲೇ ಪೂರ್ಣವಾಗಿ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಪೂರ್ಣವಾದ ವಿವರಗಳು ಬಂದ ನಂತರ ಇಲ್ಲಿ ಹೇಳುತ್ತೇನೆ.

ನಿಯಮ ೩೩೪ರ ಮೇರೆಗೆ

1 ಹಾನಗಲ್ ತಾಲ್ಲೂಕಿನಲ್ಲಿ ಬೆಳೆ ವಿಮಾ ಪರಿಹಾರ

ಶ್ರೀ ಸಿ. ಎಂ. ಉದಾಸಿ (ಹಾನಗಲ್).—ಮಾನ್ಯ ಅಧ್ಯಕ್ಷರೇ, ಬೆಳೆ ಸಾಲ ವಿಮಾ ಯೋಜನೆಯ ಅಡಿ, ಸಹಕಾರಿ ಸಂಘಗಳಿಂದ ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲ ಪಡೆದ ಹಣದ ಮೇಲೆ ವಿಮೆ ಮಾಡಿರುತ್ತಾರೆ. ಈ ವರ್ಷವು ಹಾನಗಲ್ ತಾಲ್ಲೂಕಿನಲ್ಲಿ ಭೀಕರ ಬರಗಾಲದ ಬವಣೆ ಇದ್ದು, ಬೆಳೆ ಬಾರದೆ ಅನೇಕರು ಮೇವಿಗಾಗಿ ಪರದಾಡುತ್ತಿದ್ದಾರೆ. ಬೆಳೆ ಸಾಲ ವಿಮಾ ಯೋಜನೆ ಅಡಿ ಬೆಳೆಗಳ ನಷ್ಟದ ಬಗ್ಗೆ ಪ್ರಯೋಗಗಳನ್ನು ಈಗಾಗಲೇ ಮಾಡಿ ಮುಗಿಸಿರುತ್ತಾರೆ. ಈ ವರ್ಷವೂ ಸಹಿತ ಕಳೆದ ವರ್ಷಕ್ಕಿಂತ ವಿಶೇಷವಾದ ವ್ಯತ್ಯಾಸವಿಲ್ಲದ ಬೆಳೆ ಬಂದಿರುತ್ತದೆ. ಹೀಗಾಗಿ ಈ ವರ್ಷವೂ ಬೆಳೆ ಸಾಲ ವಿಮೆಯಂ ಲಾಭ ರೈತರಿಗೆ ಸಿಗಬೇಕಾಗಿದೆ. ಸಾಲಗಾರನ ಸಾಲದ ಮರುಪಾವತಿ ಅವಧಿ ಫೆಬ್ರುವರಿ ೨೮ಕ್ಕೆ ಕೊನೆಗೊಳ್ಳುತ್ತದೆ. ವಿಮಾ ಯೋಜನೆಯವರು ತೀರ್ಮಾನ ಕೈಗೊಳ್ಳಲು ವಿಳಂಬ ಮಾಡಿದಷ್ಟು, ರೈತರಿಗೆ ತೊಂದರೆಯುಂಟಾಗುತ್ತದೆ. ಕಾರಣ, ಬೆಳೆ ಪ್ರಾತ್ಯಕ್ಷತೆಯ ಬಗ್ಗೆ ಸಂಬಂಧಪಟ್ಟ ಅಂಕಿಸಂಖ್ಯೆ ಇಲಾಖೆಗಳಿಂದ ತೀವ್ರವಾಗಿ ವಿಮಾ ಇಲಾಖೆಗೆ ಕಳುಹಿಸಿ ಬೇಗ ವಿಮಾ ಪರಿಹಾರದ ತೀರ್ಮಾನ ಕೈಗೊಳ್ಳುವಂತೆ ಕೃಷಿ ಇಲಾಖೆಯು ಸೂಕ್ತ ಕ್ರಮ ಕೈಗೊಳ್ಳಲು ಮಾನ್ಯ ಕೃಷಿ ಸಚಿವರ ಗಮನಕ್ಕೆ ತರುತ್ತೇನೆ. (ಮಾನ್ಯ ಕೃಷಿ ಸಂತ್ತು ತೋಟಗಾರಿಕೆ ಸಚಿವರ ಪರವಾಗಿ ಮಾನ್ಯ ಅಬಕಾರಿ ಮತ್ತು ಆರೋಗ್ಯ ಸಚಿವರಾದ ಶ್ರೀ ಹೆಚ್. ಟಿ. ಕೃಷ್ಣಪ್ಪ ಉತ್ತರಿಸಿದರು)

ಶ್ರೀ ಹೆಚ್. ಟಿ. ಕೃಷ್ಣಪ್ಪ (ಅಬಕಾರಿ ಮತ್ತು ಆರೋಗ್ಯ ಸಚಿವರು).— ಸ್ವಾಮಿ, ಕೇಂದ್ರ ಸರ್ಕಾರವು ೧೯೫೫-೫೬ರ ವರ್ಷಂಗಾರು ಹಂಗಾಮಿನಿಂದ ವ್ಯಾಪಕ ಬೆಳೆ ವಿಮಾ ಯೋಜನೆಯನ್ನು ಜಾರಿ